# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ಕಾವಿ/ಟೆಂಡರ್/ಎಸ್.ಎಫ್.ಸಿ/ಜೆ.ಇ(1)/5/2006-07 ದಿ: 22-11-2006

## ಅಲ್ಪಾವ ವಧಿ ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2006-07 ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ ಎಸ್.ಎಫ್.ಸಿ. ನಿಧಿಯಡಿಯಲ್ಲಿ (ರಾಜ್ಯ ಹಣಕಾಸು ಆಯೋಗ) ಹಾಗು ಸಂಸತ್ ಸದಸ್ಯರ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ನಿಗಧಿತ ನಮೂನೆಯಲ್ಲಿ ಮೊಹರಾದ ಐಟಂವಾರು ಟೆಂಡರ್‌ಗಳನ್ನು ಕ್ರ.ಸಂ 7,8,9 ಮತ್ತು 13 ರ ಕಾಮಗಾರಿಗಳಿಗೆ ಮತ್ತು ಉಳಿಕೆ 9 ಕಾಮಗಾರಿಗಳಿಗೆ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೋಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ಕೋರಿಕೆಯನ್ನು ದಿನಾಂಕ: 08-12-2006 ಸಾಯಂಕಾಲ 4.00 ಘಂಟೆಯೊಳಗಾಗಿ ಸಂಬಂಧಿಸಿದಂತೆ ಫಾರಂ ಶುಲ್ಕ ರೂ. 500+ ತೆರಿಗೆ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 12-12-2006 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 15-12-2006 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗೊ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ದಿನಗಳಲ್ಲಿ ಹಾಜರಿರುವ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಅಥವಾ ರಾಷ್ಟ್ರೀಯ ಉಳಿತಾಯ (NSC) ಪತ್ರವನ್ನು (ಹಾಲಿ ಚಾಲ್ತಿಯಲ್ಲಿರುವ) ಪೌರಾಯುಕ್ತರಿಗೆ ಪ್ಲೆಡ್ಜ್ ಮಾಡಿ ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ/ NSC ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರತಕ್ಕದ್ದು.

6 ಡಾಂಬರ್ ಕಾಮಗಾರಿಯನ್ನು ನಿರ್ವಹಿಸಲು ಪೇವರ್ ಮಿಷನ್ ಹೊಂದಿರುವ ಬಗ್ಗೆ ದಾಖಲೆಗಳನ್ನು ಟೆಂಡರ್ ಫಾರಂ ಕೋರಿಕೆಯ ಅರ್ಜಿಯನ್ನು ಸಲ್ಲಿಸತಕ್ಕದ್ದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ಧರಾಗಿರತಕ್ಕದ್ದು.

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಪಿ.ಡ್ಬ್ಯೂ.ಡಿ-65ರ ಹತ್ತನೇ ಷರತ್ತಿನಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರ ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಛಗೊಳಿಸಲು ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

11. ಟೆಂಡರ್ ಮಂಜೂರಾತಿಯು ನಗರಸಭೆ ಕಾಯ್ದೆ ಹಾಗೊ ನಿಯಾಮಾವಳಿಯಂತೆ ಕಾಯ್ದಿರಿಸಲಾಗಿದೆ.

PDF Created with deskPDF PDF Writer - Trial :: http://www.docudesk.com

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಠಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ, ಹಿಂತೆಗೆದುಕೊಳ್ಳುವ ಅಥವಾ ರದ್ದು ಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಹಿಸತಕ್ಕದ್ದು

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಟಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

17. ಹೆಚ್ಚಿನ ವಿವರಗಳನ್ನು ಹಾಗೊ ಕಾಮಗಾರಿಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ. ಸಂ | ಕಾಮಗಾರಿ ವಿವರ | ಆಂದಾಜು ಮೊತ್ತ (ಲಕ್ಷ ರೂ. | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| 1 | ವಾರ್ಡ್ ನಂ 7ರ ಅಗ್ರಹಾರ ಬಡಾವಣೆಯ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಾಮನಗುಡಿ ಸರ್ಕಲ್‌ವರೆಗೆ ಹಾಗೂ ಮಹಿಳಾ ಪಾಲಿಟೆಕ್ನಿಕ್‌ನಿಂದ ಚಾಮುಂಡೇಶ್ವರಿ ದೇವಸ್ಥಾನದ ವರೆಗೆ ಮತ್ತು ಕೆನರಾ ಬ್ಯಾಂಕ್ ಪಕ್ಕದ ರಸ್ತೆಯನ್ನು ಡಾಂಬರ್ ಮಾಡುವುದು. | 3.30 | 8250 | 90 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |
| 2 | ವಾರ್ಡ್ ನಂ. 12 ರ ನಗರಸಭಾ ಬಡಾವಣೆಯ ಮಸೀದಿ ರಸ್ತೆ ಮತ್ತು ಟ್ಯಾಗೋರ್ ಸ್ಕೂಲ್ ರಸ್ತೆ ಡಾಂಬರೀಕರಣ ಮಾಡುವುದು | 3.38 | 8450 | 90 ದಿನಗಳು | ಡಿಟೋ |
| 3 | ವಾರ್ಡ್ ನಂ. 13 ರ ಮಸೀದಿ ರಸ್ತೆ ಜಿಯಾವುಲ್ಲಾ ಮನೆ ರಸ್ತೆ ಮತ್ತು ತೋಪ್‌ಖಾನ್ ಮೊಹಲ್ಲಾ ಅಡ್ಡ ರಸ್ತೆಗಳನ್ನು ಡಾಂಬರೀಕರಣ ಮಾಡುವುದು | 4.90 | 12250 | 90 ದಿನಗಳು | ಡಿಟೋ |
| 4 | ವಾರ್ಡ್ ನಂ.20ರ ಹುಣಸನಹಳ್ಳಿ ರಸ್ತೆಯಿಂದ ನಿಸಾರ್‌ಅಮ್ಮದ್ ಮನೆವರೆಗೆ ಮತ್ತು ಸೀರ್ ಹಳ್ಳದಿಂದ ಯಾರಬ್ ನಗರ ನೂರಾನಿ ಮಸೀದಿ ರಸ್ತೆಯ ಬೋರ್‌ವರೆಗೆ ಡಾಂಬರೀಕರಣ ಮಾಡುವುದು. | 3.42 | 8550 | 90 ದಿನಗಳು | ಡಿಟೋ |
| 5 | ವಾರ್ಡ್.ನಂ.31 ರ ಅರ್ಚಕರಹಳ್ಳಿಯ ಶಾಲೆಯಿಂದ ರಂಗರಾಯರ ದೊಡ್ಡಿ ರಸ್ತೆವರೆಗೆ ಡಾಂಬರ್ ಮಾಡುವುದು. | 3.15 | 7875 | 90 ದಿನಗಳು | ಡಿಟೋ |
| 6 | ವಾರ್ಡ್ ನಂ.20,21, ರ ತುರುಪಲಾಯದ ರೈಲ್ವೆಗೇಟ್ ನಿಂದ ಶಿರಹಳ್ಳದವರೆಗೆ ಡಾಂಬರೀಕರಣ ಮಾಡುವುದು | 2.50 | 6250 | 90 ದಿನಗಳು | ಡಿಟೋ |

PDF Created with deskPDF PDF Writer - Trial :: http://www.docudesk.com

| ಕ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷ ರೂ. | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| 7 | ವಾರ್ಡ್ ನಂ.13,14,15,16,17 ರ ಹಳೇ ಬಿ.ಎಂ ರಸ್ತೆಯಿಂದ ನೇರಳೆಕೆರೆ ಗೇಟ್‌ವರೆಗೆ ಡಾಂಬರೀಕರಣ ಮಾಡುವುದು | 5.58 | 11160 | 90 ದಿನಗಳು | ಡಿಟ್ಟೋ |
| 8 | ವಾರ್ಡ್.ನಂ.14,15,16 ಮತ್ತು 17 ರಲ್ಲಿ ಬರುವ ಬಾಲಗೇರಿ ಅರಳಿಮರದಿಂದ ಶಾಲೆವರೆಗೆ ಮತ್ತು ಶಾಲೆಯಿಂದ ಹಕ್ಕುಲ್ಲಾ ಷರೀಫ್ ಮನೆವರೆಗೆ ಡಾಂಬರೀಕರಣ ಮಾಡುವುದು | 6.05 | 12100 | 90 ದಿನಗಳು | ಡಿಟ್ಟೋ |
| 9 | ವಾರ್ಡ್ ನಂ.26,29,30 ರಲ್ಲಿ ಬರುವ ಐಜೂರು ಗುಡ್ಡೆಯ ದರ್ಗಾ ಹತ್ತಿರದಿಂದ ಡಾ॥ ತಿಮ್ಮಯ್ಯ ಮನೆತನಕ ಡಾಂಬರೀಕರಣ ಮಾಡುವುದು | 5.00 | 12500 | 90 ದಿನಗಳು | ಡಿಟ್ಟೋ |
| 10 | ವಾರ್ಡ್ ನಂ. 13 ರ ಉರ್ದು ಸ್ಕೂಲ್‌ನಿಂದ ನಿಸಾರ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1.98 | 4950 | 90 ದಿನಗಳು | ಡಿಟ್ಟೋ |
| 11 | ವಾರ್ಡ್ ನಂ. 8 ರ ಬರುವ ಜೀವನ್ ರಾಯ್ ಗಲ್ಲಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ (12 ನೇ ಹಣಕಾಸು ಯೋಜನೆ) | 3.96 | 10000 | 90 ದಿನಗಳು | ಡಿಟ್ಟೋ |
| 12 | ವಾರ್ಡ್.ನಂ.23 ರ ಟಿಪ್ಪುನಗರದ ಕೊತ್ತಿಪುರ ರಸ್ತೆಯಿಂದ ಕೇಬಲ್ ಫಯಾಜ್ ಮನೆವೆರೆಗೆ, ಅಬ್ದುಲ್ ಕರೀಂ ಮನೆ ಅಮಾನ್ ಮನೆ ಮತ್ತು ಅನ್ವರ್ ಸಾಬ್ ಮನೆಯಿಂದ ಬಸ್‌ಲಾಲ್ ಮನೆವರೆಗೆ ಚರಂಡಿ ನಿರ್ಮಾಣ. (ಎಸ್.ಎಫ್.ಸಿ. 2ನೇ ಕರೆ) | 3.40 | 8500 | 90 ದಿನಗಳು | ಡಿಟ್ಟೋ |
| 13 | ಬಿ.ಎಂ.ರಸ್ತೆಯ ಪಕ್ಕದಲ್ಲಿರುವ ಮುಸ್ಲಿಂ ಸ್ಮಶಾನದ ಪಶ್ಚಿಮ ಭಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ. (ಸಂಸತ್ ಸದಸ್ಯರ ನಿಧಿ (2ನೇ ಕರೆ) | 5.00 | 10500 | 90 ದಿನಗಳು | ಡಿಟ್ಟೋ |

(ಶಿವಣ್ಣ)
ಪೌರಾಯುಕ್ತರು
ನಗರಸಭೆ,ರಾಮನಗರ

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com

*

*

*

*

*

PDF Created with deskPDF PDF Writer - Trial :: http://www.docudesk.com

*

*

*

*

PDF Created with deskPDF PDF Writer - Trial :: http://www.docudesk.com